ಉದ್ದೇಶದಿಂದ ಜಿಲ್ಲಾಧಿಕಾರಿಗಳು, ಮತ್ತು ಇದುವರೆವಿಗೂ ಇದ್ದಂತಹ ನಗರಾಭಿವೃದ್ಧಿ ಮಂಡಲ ಮತ್ತು ಯೋಜನಾಪ್ರಾಧಿಕಾರದ ಅಧಿಕಾರಿಗಳು ಸೇರಿ, ಪರಿಶೀಲನೆ ಮಾಡಿ ಕಳುಹಿಸಬೇಕೆಂದು ಮಾಡಿದ್ದೇವೆ. ಆದರೆ ಹಿಂದೆ ಏನಾದರೂ ನಿಯಮಕ್ಕೆ ವಿರುದ್ಧವಾಗಿ ಏನಾದರೂ ಆಗಿದ್ದರೆ ಅದನ್ನು ಪೂರ್ಣವಾಗಿ ತನಿಖೆ ಮಾಡಿಸುತ್ತೇನೆ.

ಜಿಲ್ಲಾ ಪರಿಷತ್ ಹಾಗೂ ಮಂಡಲ ಪಂಚಾಯಿತಿಗಳಿಗೆ ಸರಕಾರದಿಂದ ಬಿಡುಗಡೆಮಾಡಿದ ಹಣ

೧೭೫೬. ಶ್ರೀ ಆರ್.ರಾಮಯ್ಯ (ಹಿರಿಯೂರು).—ಪ್ರಾಮೀಣ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್, ವಕ್ಫ್ ಹಾಗೂ ಪಶುಸಂಗೋಪನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೭-೮೮ ನೇ ಸಾಲಿಗೆ ರಾಜ್ಯ ಸರ್ಕಾರ ತನ್ನ ಬಜೆಟ್‌ನಲ್ಲಿ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತಿಗಳಿಗೆ ಬಿಡುಗಡೆ ಮಾಡಿರುವ ಹಣವೆಷ್ಟು ? ಇದು ಪೂರ್ಣವಾಗಿ ಬಿಡುಗಡೆಯಾಗಿದೆಯೇ ? ಜಿಲ್ಲಾವಾರು ವಿವರ ನೀಡುವುದು.

ಆ) ಚಿತ್ರದುರ್ಗ ಜಿಲ್ಲಾ ಪರಿಷತ್‌ಗೆ ಬರಬೇಕಾಗಿದ್ದ ೪೦ ಕೋಟಿ ರೂಗಳಲ್ಲಿ ಕೇವಲ ೨೮ ಕೋಟಿ ರೂ. ಬಿಡುಗಡೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ಸದರಿ ಹಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ವಿಶೇಷ ಜಾತಿಯಾಗಿರುವ ಹಣವೆಷ್ಟು ಮತ್ತು ಇದರ ಪೂರ್ಣ ಉಪಯೋಗವಾಗಿದೆಯೇ ? ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು).--

ಅ) ಜಿಲ್ಲಾ ಪರಿಷತ್ತುಗಳಿಗೆ ಬಿಡುಗಡೆ ಮಾಡಿದ ಹಣದ ವಿವರಣೆಯನ್ನು ಲಗತ್ತಿಸಿದೆ. ಯಾವುದೇ ಹಣವನ್ನು ಮಂಡಲ ಪಂಚಾಯತಿಗಳಿಗೆ ಸರ್ಕಾರದಿಂದ ನೇರವಾಗಿ ಬಿಡುಗಡೆ ಮಾಡುವುದಿಲ್ಲ.

ಆ) ೧೯೮೭-೮೮ ನೇ ಸಾಲಿಗಾಗಿ ಒಟ್ಟಾರೆ ೪೪.೫೯ ಕೋಟಿ ರೂ. ಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

ಇ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ೧೯೮೭-೮೮ ನೇ ಸಾಲಿಗಾಗಿ ೩೧೦ ಲಕ್ಷ ರೂಪಾಯಿಗಳನ್ನು ವಿಂಗಡಿಸಲಾಗಿತ್ತು. ಇದರಲ್ಲಿ ೨೮೯-೦೨ ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ. ಉಳಿದ ಹಣವನ್ನು ಈ ಸಾಲಿನಲ್ಲಿ ಖರ್ಚು ಮಾಡಲಾಗುವುದು.

ಪ್ರಶ್ನೆ (ಅ) ಕ್ಕೆ ಉತ್ತರ

ಜಿಲ್ಲಾ ಪರಿಷತ್ತುಗಳಿಗೆ ೧೯೮೭-೮೮ ನೇ ಸಾಲಿಗೆ ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಹಣ

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಯೋಜನೆ	ಯೋಜನೇತರ	ಒಟ್ಟು
೧	ಬೆಂಗಳೂರು (ಗ್ರಾಮಾಂತರ)	೧೮೬೯.೩೨೦	೨೪೨೯.೩೪೦	೪೨೯೮.೬೬೦
೨	ಚಿತ್ರದುರ್ಗ	೨೦೩೫.೦೬೦	೨೪೨೪.೭೮೫	೪೪೫೯.೪೪೫
೩	ಕೋಲಾರ	೨೫೧೦.೧೩೦	೨೪೪೬.೨೧೦	೪೯೩೬.೩೪೦
೪	ಶಿವಮೊಗ್ಗ	೨೨೩೭.೩೪೫	೨೫೧೧.೧೮೩	೪೭೪೮.೫೨೮
೫	ತುಮಕೂರು	೨೪೪೪.೭೯೫	೨೯೮೪.೫೬೧	೫೪೩೦.೩೫೬
೬	ಮೈಸೂರು	೩೫೮೨.೨೯೮	೩೫೨೯.೨೪೮	೭೧೧೧.೫೪೬
೭	ಚಿಕ್ಕಮಗಳೂರು	೧೪೬೫.೦೭೦	೧೭೩೨.೧೧೦	೩೧೯೭.೧೪೦
೮	ದಕ್ಷಿಣ ಕನ್ನಡ	೨೪೩೮.೯೧೦	೩೫೨೯.೨೩೦	೫೯೬೮.೧೪೦
೯	ಹಾಸನ	೨೦೪೬.೦೪೦	೨೧೯೫.೧೨೬	೪೨೪೧.೧೬೬
೧೦	ಕೊಡಗು	೧೦೧೭.೪೯೯	೯೯೩ ೧೪೯	೨೦೧೦.೬೩೮
೧೧	ಮಂಡ್ಯ	೧೬೫೮.೩೮೨	೧೯೬೭.೯೪೪	೩೬೨೬.೩೨೬
೧೨	ಬೆಳಗಾಂ	೩೧೦೬.೪೯೦	೩೩೭೪.೬೧೦	೬೪೮೧.೧೦೦
೧೩	ಬಿಜಾಪುರ	೨೬೦೭.೮೨೮	೩೪೬೮.೧೯೦	೬೦೭೬.೦೧೮
೧೪	ಧಾರವಾಡ	೩೫೭೮.೧೧೦	೪೧೮೯.೭೨೦	೭೭೬೭.೮೩೦
೧೫	ಉತ್ತರ ಕನ್ನಡ	೧೫೦೯.೯೮೦	೪೩೦೦.೫೬೦	೩೮೯೯.೫೪೦
೧೬	ಗುಲ್ಬರ್ಗ	೨೮೯೭.೬೭೦	೨೯೭೪.೮೪೦	೫೮೭೨.೫೧೦
೧೭	ಬಳ್ಳಾರಿ	೨೦೫೯.೩೦೦	೧೭೯೬.೩೩೦	೩೮೫೫.೬೩೦
೧೮	ಬೀದರ್	೧೧೨೩.೦೦೦	೧೩೪೨ ೦೦೦	೨೪೬೫.೦೦೦
೧೯	ರಾಯಚೂರು	೨೨೧೨.೭೩೬	೨೪೧೩.೩೪೦	೪೬೨೬.೦೭೬
	ಒಟ್ಟು	೪೨೪೦೦.೯೫೩	೪೪೫೯೧.೪೭೬	೯೦೯೭೨.೪೨೯

ಶ್ರೀ ಆರ್. ರಾಮಯ್ಯ.—೧೯೮೭-೮೮ ನೇ ಸಾಲಿಗೆ ರಾಜ್ಯ ಸರ್ಕಾರ ತನ್ನ ಬಡ್ಜೆಟ್ಟಿನಲ್ಲಿ ಜಿಲ್ಲಾ ಪರಿಷತ್ತಿಗಾಗಿ ಎಷ್ಟು ಹಣವನ್ನು ಕಾಯ್ದಿರಿಸಿದ ಹಣವೆಷ್ಟು ? ಆ ಹಣದಲ್ಲಿ ಎಲ್ಲ ಹಣವನ್ನು ಪೂರ್ಣವಾಗಿ ಬಿಡುಗಡೆ ಮಾಡಿದೆಯೇ ಅಥವಾ ಇಲ್ಲವೇ ಎಂಬುದಾಗಿ ವಿವರಗಳನ್ನು ನಾನು ಕೇಳಿದ್ದೇನೆ. ಅದಕ್ಕಾಗಿ ಜಿಲ್ಲವಾರು ವಿವರಗಳನ್ನು ಕೊಟ್ಟಿದ್ದಾರೆ. ಆದರೆ ಗುರಿ ಏನು ನಿಗದಿ ಮಾಡಲಾಗಿತ್ತು ಎಂಬುದನ್ನು ಮಾನ್ಯ ಮಂತ್ರಿಗಳು ದಯವಿಟ್ಟು ಹೇಳಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—೧೯೮೭-೮೮ ನೇ ಸಾಲಿನಲ್ಲಿ ಒಟ್ಟು ಹಣ ಇಟ್ಟಿದ್ದು ಅಷ್ಟೆ ಬಿಡುಗಡೆ ಮಾಡಿದ್ದು ಅಷ್ಟೆ.

ಶ್ರೀ ಆರ್. ರಾಮಯ್ಯ.—ಇಟ್ಟಿದ್ದು ಅಷ್ಟೆ ಎಂದು ನೀವು ಯಾವ ಕಡೆಯೂ ಹೇಳಿಲಿಲ್ಲ ?

ಶ್ರೀ ಎ. ಲಕ್ಷ್ಮೀಸಾಗರ್.—ಇದರ ಬಗ್ಗೆ ಜಿಲ್ಲಾವಾರು ಅಂಕಿಅಂಶಗಳನ್ನು ಕೊಟ್ಟಿದ್ದೇನೆ. ಬೇಡಿಕೆಯ ಆಧಾರವನ್ನು ಗಮನದಲ್ಲಿಟ್ಟುಕೊಂಡು ಸರ್ಕಾರದ ಆರ್ಥಿಕ ಅನುಕೂಲದ ಇತಿಮಿತಿಗಳ ಒಳಗೆ ಅಲ್ಲಿನ ಜಿಲ್ಲಾ ಮಟ್ಟದ ಅಭಿವೃದ್ಧಿ ಕಾರ್ಯಗಳ ಒಟ್ಟು ಕಾಮಗಾರಿಗಳ ಲೆಕ್ಕವನ್ನು ಗಮನದಲ್ಲಿಟ್ಟುಕೊಂಡು ಅಭಿವೃದ್ಧಿಯನ್ನು ಸಾಧಿಸುವುದಕ್ಕೋಸ್ಕರ ಆ ವರ್ಷದಲ್ಲಿ ಎಷ್ಟು ಕೊಡುವುದಕ್ಕೆ ಸಾಧ್ಯವೊ ಅಷ್ಟು ಹಣವನ್ನು ಕೊಡುತ್ತೇವೆ. ಅವರು ಕೇಳಿದಷ್ಟು ಹಣವನ್ನು ಜಿಲ್ಲಾವಾರು ಮಟ್ಟದಲ್ಲಿ ಕೊಡುವುದಕ್ಕಾಗುವುದಿಲ್ಲವೆಂಬುದು ಸನ್ಮಾನ್ಯ ರಾಮಯ್ಯನವರಿಗೂ ಗೊತ್ತಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಒದಗಿಸಿರುವ ಹಣ

೨೦೩೭. ಶ್ರೀ ಎಂ ವೀರಯ್ಯಸ್ವಾಮಿ(ಚಿಂಚೋಳಿ).—ಮಾನ್ಯವಾರ್ತಾ, ಪ್ರವಾಸೋದ್ಯಮ, ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟುಉತ್ತರಿಸುವರೇ ?

ಅ) ೧೯೮೬ರ ಏಪ್ರಿಲ್‌ನಿಂದ ೧೯೮೮ರ ಮಾರ್ಚ್‌ರವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಪ್ರತಿ ಆರ್ಥಿಕ ವರ್ಷಕ್ಕೆ ಒದಗಿಸಿದ ಹಣವೆಷ್ಟು ?

ಆ) ಯಾವ ಯಾವ ಕಾರ್ಯಕ್ರಮಗಳಿಗೆ ಈ ಹಣವನ್ನು ವಿನಿಯೋಗಿಸಲಾಯಿತು. ಪ್ರತಿ ಜಿಲ್ಲೆಗೆ ಖರ್ಚು ಮಾಡಿದ ವಿವರ ಒದಗಿಸುವುದು.

ಇ) ಗುಲ್ಬರ್ಗಾ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಈ ಇಲಾಖೆಗೆ ಒದಗಿಸಿದ ಹಣ ವೆಷ್ಟು (ತಾಲ್ಲೂಕುವಾರು ಹಾಗೂ ಪ್ರತಿವರ್ಷ ಎಷ್ಟು ಹಣ ಖರ್ಚು ಮಾಡಲಾಗಿದೆ ಎಂಬ ವಿವರ ನೀಡುವುದು)

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ ಸಂಸ್ಕೃತಿ ಹಾಗೂ ಬಿಡಿಎ ಸಚಿವರು)—

ಅ) ೧೯೮೬-೮೭ನೇ ಸಾಲಿಗೆ ರೂ. ೫,೮೪,೯೮,೦೦೦.೦೦
೧೯೮೭-೮೮ನೇ ಸಾಲಿಗೆ ರೂ.೬,೧೫,೪೪,೦೦೦.೦೦

ಆ) ಅನುಬಂಧ-೧ರಲ್ಲಿ ನೀಡಿದೆ.

ಕನ್ನಡ ಅಭಿವೃದ್ಧಿಗೆ ಸಂಬಂಧಿಸಿದಂತೆ ಪ್ರತಿ ಜಿಲ್ಲೆಯಲ್ಲಿ ಸುಮಾರು ರೂ. ೨೩,೦೦೦.೦೦ನಂತೆ ಖರ್ಚು ಮಾಡಲಾಗಿದೆ.

ಸಂಸ್ಕೃತಿ ಪ್ರಚಾರಕ್ಕೆ ಸಂಬಂಧಿಸಿದಂತೆ ಪ್ರತಿ ಜಿಲ್ಲೆಯಲ್ಲಿ ರೂ ೧೦,೦೦೦.೦೦ರಂತೆ ಹಾಗೂ ವಿಭಾಗೀಯ ಕೇಂದ್ರಗಳಲ್ಲಿ ರೂ.೨೦,೦೦೦.೦೦ಗಳಂತೆ ಖರ್ಚು ಮಾಡಲಾಗಿದೆ.

ಇ) ಅನುಬಂಧ-೨ ರಲ್ಲಿ ನೀಡಲಾಗಿದೆ.

ಅನುಬಂಧ—೧

೧೯೮೬-೮೭ನೇ ಸಾಲಿನಲ್ಲಿ ಈ ಕೆಳಕಂಡ ಕಾರ್ಯಕ್ರಮಗಳಿಗೆ ಹಣ ಬಿಡುಗಡೆ ಮಾಡಲಾಗಿದೆ.

೧ ಆದರ್ಶ ಫಿಲಂ ಇನ್ಸ್‌ಟ್ಯೂಟ್‌ಗೆ ಧನಸಹಾಯ
೨ ನೀನಾಸಂ ಹೆಗ್ಗೋಡು ಸಂಸ್ಥೆಗೆ ಧನಸಹಾಯ
೩ ಚಾಮರಾಜೇಂದ್ರ ದೃಶ್ಯಕಲಾ ಅಕಾಡಮಿಗೆ ಧನಸಹಾಯ
೪ ಜನಪ್ರಿಯ ಸಾಹಿತ್ಯ ಪ್ರಕಾಶನ ಪ್ರಕಟಣೆ ಧನಸಹಾಯ
೫ ಗ್ರಂಥಕರ್ತರಿಗೆ ಮತ್ತು ಸಂಸ್ಥೆಗೆ ಧನಸಹಾಯ
೬ ಸಂಸ್ಕೃತಿ ಪ್ರಚಾರ
೭ ರಾಷ್ಟ್ರಕವಿಗಳು ಮತ್ತು ಪ್ರಸಿದ್ಧ ಗ್ರಂಥಕರ್ತರು, ಕವಿ ಮಂಜಾದವರಿಗೆ ಗೌರವ ಸಂಭಾವನೆ